ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಬೆಂಗಳೂರು ನಗರ ಭಾಗದಲ್ಲಿ ಯಾವುದೇ ಲೈವ್‌ಬ್ಯಾಂಡ್ ಮನರಂಜನಾ ಕೇಂದ್ರಗಳು ನಡೆಯುತ್ತಿರುವುದಿಲ್ಲ ಆ ಬಗ್ಗೆ ಮಾಹಿತಿ ಬಂದಲ್ಲಿ ತಕ್ಷಣವೇ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ

ಆ) ಅನ್ವಯಿಸುವುದಿಲ್ಲ

ಇ) ಬೆಂಗಳೂರು ನಗರದ ಭಾಗದಲ್ಲಿ ಇಂತಹ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ

ಈ) ಅನ್ವಯಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

1548 (2208) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳೂ ಸೇರಿದಂತೆ ಪ್ರಮುಖ ರಸ್ತೆಗಳ ಅಕ್ಕ-ಪಕ್ಕ ಹಾಗೂ ಹೆದ್ದಾರಿಗೆ ಸಂಬಂಧಪಟ್ಟ ಜಾಗದಲ್ಲಿ ಅನಧಿಕೃತವಾಗಿ ದರ್ಗಾ(ಮಸೀದಿ) ಮತ್ತು ಶಿಲುಬೆಗಳನ್ನು ನಿರ್ಮಿಸಿರುವ ಪ್ರಕರಣಗಳು ಬೆಳಕಿಗೆ ಬಂದಿದೆಯೇ,

ಆ) ಇಂತಹ ಅನಧಿಕೃತವಾಗಿ ತಲೆಎತ್ತಿರುವಂತಹ ದರ್ಗಾ ಶಿಲುಬೆಗಳ ಸಂಖ್ಯೆ ಎಷ್ಟು, (ಜಿಲ್ಲಾವಾರು ಹಾಗೂ ಹೆದ್ದಾರಿ ರಸ್ತೆಗಳವಾರು ವಿವರ ಒದಗಿಸುವುದು)

ಇ) ಈ ಅನಧಿಕೃತ ದರ್ಗಾ, ಶಿಲುಬೆಗಳ ತೆರವಿಗೆ ಸರ್ಕಾರ ಕೈಗೊಂಡ ಕ್ರಮಗಳೇನು,

ಈ) ಇದುವರೆಗೆ ತೆರವುಗೊಳಿಸದಿರಲು ಕಾರಣಗಳೇನು, ಈಗಾಗಲೇ ತೆರವು ಗೊಳಿಸಿರುವವುಗಳ ಸಂಖ್ಯೆ ಎಷ್ಟು, (ಜಿಲ್ಲಾವಾರು ವಿವರವಾದ ಮಾಹಿತಿ ಒದಗಿಸುವುದು)?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಂದಿದೆ

ಆ) ಒಟ್ಟು 26 ಪ್ರಕರಣಗಳು ಗಮನಕ್ಕೆ ಬಂದಿರುತ್ತವೆ

ರಾಷ್ಟ್ರೀಯ ಹೆದ್ದಾರಿ

	ಸಂಖ್ಯೆ
ಉತ್ತರ ಕನ್ನಡ ಜಿಲ್ಲೆ–ರಾಹೆ–17 ಕಿ ಮೀ 195 ಹಾಗೂ 198	2
ರಾಹೆ–63 ಕಿ ಮೀ 24, 93 ಹಾಗೂ 101	3
ರಾಹೆ–206 ಕಿ ಮೀ 348	1
ಬಿಜಾಪುರ ಜಿಲ್ಲೆ ರಾಹೆ–218 ಕಿಮೀ 2 90 ಎಡಬದಿಗೆ	1
ಬೀದರ್ ಜಿಲ್ಲೆ ರಾಹೆ–9ರ (ಕಿ ಮೀ 372, 378, 387, 393, 412, 415) ಅಕ್ಕಪಕ್ಕ	6
ಚಿಕ್ಕಮಗಳೂರು ಜಿಲ್ಲೆ ರಾಹೆ–206 ಕಿ ಮೀ 142 00, 170 00, 183 00	3
ರಾಹೆ – 13 ಕಿ ಮೀ 535 00	1
ಒಟ್ಟು	**17**

ಉತ್ತರ ವಲಯ

ರಾಣೆಬೆನ್ನೂರು ಉಪವಿಭಾಗ

1	ಬಾಗಲಕೋಟೆ ಬಿಳಿಗಿರಿರಂಗನಬೆಟ್ಟ ರಾಜ್ಯ ಹೆದ್ದಾರಿ	ಕಿ ಮೀ 27 90 (ಮಾಸೂರ ಗುತ್ತಲ) ಜಿಲ್ಲಾ ಮುಖ್ಯರಸ್ತೆ
2	ಸದರ	ಕಿ ಮೀ 27 90 (ಮಾಸೂರ ಗುತ್ತಲ) ಜಿಲ್ಲಾ ಮುಖ್ಯರಸ್ತೆ

3	ಹಲಗೇರಿ ಹುಲಿಕಲ್ ರಾಜ್ಯ ಹೆದ್ದಾರಿ	ಕಿ ಮೀ 7 70
4	ಸದರ	ಕಿ ಮೀ 242 20 (ಗಂಗಾಮೂಲ ತಡಸ ರಾಜ್ಯ ಹೆದ್ದಾರಿ)
5	**ಶಿಗ್ಗಾಂವಿ ಉಪವಿಭಾಗ** ಪಡುಬಿದ್ರಿ ಚಿಕ್ಕಾಲ ಗುಡ್ಡ ರಾಜ್ಯ ಹೆದ್ದಾರಿ	**ಕಿಮೀ** 242 20 (ಗಂಗಾಮೂಲ ತಡಸ ರಾಜ್ಯ ಹೆದ್ದಾರಿ)
6	ಕಾರವಾರ ಕೈಗಾ ಇಳಕಲ್ ರಾಜ್ಯ ಹೆದ್ದಾರಿ	ಕಿಮೀ 158 30
7	ಸವಣೂರು ಶೆರೆವಾಡ ಜಿಲ್ಲಾ ಮುಖ್ಯ ರಸ್ತೆ	ಕಿ ಮೀ 14 00
8	**ಸವಣೂರು ತಾಲ್ಲೂಕು** ಕಾರವಾರ ಕೈಗಾ ಇಳಕಲ್ ರಾಜ್ಯಹೆದ್ದಾರಿ	ಕಿಮೀ 179 30
9	ಸದರ	ಕಿಮೀ 180 20

ಇ) ದರ್ಗಾ, ಶಿಲುಬೆಗಳನ್ನು ತೆರವುಪಡಿಸುವ ಬಗ್ಗೆ ನಗರಸಭೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಇವರುಗಳ ಸಹಕಾರ ಕೋರಲಾಗಿದೆ ಹಾವೇರಿ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಮುಸ್ಲಿಂ ಸಮಾಜದವರೊಂದಿಗೆ ಚರ್ಚಿಸಿ ಗಲಭೆಗೆ ಆಸ್ಪದ ನೀಡದಂತೆ ಸೌಹಾರ್ದಯುತವಾಗಿ ಇತ್ಯರ್ಥಗೊಳಿಸಲು ಪ್ರಯತ್ನಿಸಲಾಗುತ್ತಿದೆ

ಈ) ಈ ನಿರ್ಮಾಣಗಳು ಬಹಳ ಹಿಂದಿನಿಂದಲೂ ಇದ್ದು, ಇವುಗಳನ್ನು ತೆರವುಗೊಳಿಸಲು ಹಲವು ಬಾರಿ ಪ್ರಯತ್ನಿಸಲಾಗಿದೆ ಆದಾಗ್ಯೂ ಇತರ ಸಂಬಂಧ ಪಟ್ಟ ಇಲಾಖೆಗಳ ಸಹಕಾರದಿಂದ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು